ಎಂ.ಎಸ್. ಆಶಾದೇವಿ

# ವಿಶ್ವಪ್ರಜ್ಞೆಯೇ ಮೂಲಧ್ವನಿಯಾದ ಎಚ್.ಎಸ್. ಶಿವಪ್ರಕಾಶರ ಕಾವ್ಯ

'ಹೋಗಿ ಬನ್ನಿ ಋತುಗಳೇ' ಎಚ್.ಎಸ್. ಶಿವಪ್ರಕಾಶರ ಈ ತನಕದ ಸಮಗ್ರ ಕಾವ್ಯ. ಕನ್ನಡ ಕಾವ್ಯದ ಸಿದ್ಧಿಗೊಂದು ಶಿಖರದಂತಿದೆ ಈ ಸಂಪುಟ. ಶಿವಪ್ರಕಾಶರ ಕಾವ್ಯವನ್ನು ಕುರಿತಂತೆ ಈ ತನಕ ನಡೆದಿರುವ ಅಧ್ಯಯನ ಮಾದರಿಗಳನ್ನು ಬಿಟ್ಟು ಹೊಸ ಆಯಾಮಗಳಲ್ಲಿ ನೋಡಬಹುದಾದ, ನೋಡಬೇಕಾದ ಸಾಧ್ಯತೆಗಳನ್ನು ಈ ಕೃತಿ ತೆರೆಯುತ್ತಿದೆ. ಶಿವಪ್ರಕಾಶರು ಕನ್ನಡ ಕಾವ್ಯ ಪರಂಪರೆಯ ಜೊತೆಯಲ್ಲಿ ಕಟ್ಟಿಕೊಂಡಷ್ಟೇ ಗಾಢವಾದ ಅನುಬಂಧವನ್ನು ವಿಶ್ವಕಾವ್ಯದ ಜೊತೆಯಲ್ಲಿಯೂ ಕಟ್ಟಿಕೊಂಡಿದ್ದಾರೆ. ಅವರ ವಿಶ್ವಕಾವ್ಯದ ಜೊತೆಗಿನ ಸಂಬಂಧಕ್ಕೂ ಅವರ ಕಾವ್ಯದ ಗುಣ ಲಕ್ಷಣಗಳಿಗೂ ಸಂಬಂಧವಿದೆಯೆ ಎನ್ನುವ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಇದನ್ನು ಇನ್ನೊಂದು ನೆಲೆಯಲ್ಲಿ, ಸರಳವಾಗಿ ಕೇಳಿಕೊಳ್ಳಬಹುದು. ವಿಶ್ವ ಕಾವ್ಯದ ಜೊತೆಗಿನ ಸಖ್ಯವು ಶಿವಪ್ರಕಾಶರ ಉತ್ತರಾರ್ಧದ ಕಾವ್ಯದ ಮೇಲೆ ಪ್ರಭಾವ ಬೀರಿದೆಯೆ? ವಿಶ್ವಕಾವ್ಯದ ಸತ್ವವನ್ನೆಲ್ಲ ಹೀರಿಯೂ ಇವರ ಕಾವ್ಯದ 'ತನ್ನತನದ ಪನ್ನತಿಕೆ' ಹಾಗೆಯೇ ಉಳಿದಿದೆ. ಹೀಗಾಗಿ, ಇವರನ್ನು ವಿಶ್ವಕಾವ್ಯದ ವಕ್ತಾರರೆಂದು ಕರೆಯುವಾಗಲೇ ಅದರ ವಾರಸುದಾರರೆಂದೂ ಹೇಳಬಹುದು.

ವಿಲಕ್ಷಣ ಎನ್ನುವಂತೆ, ಶಿವಪ್ರಕಾಶರ ಕಾವ್ಯದ ಮೂಲ ಭಿತ್ತಿಯು ವಿಶ್ವಕಾವ್ಯದ ಗೆಳೆತನದಿಂದ ವಿಸ್ತರಿಸಿದೆಯೇ ಹೊರತು, ಅದರಿಂದಾಗಿ ಅವರ ಕಾವ್ಯದ ಭಿತ್ತಿಯೇನೂ ಬದಲಾಗಿಲ್ಲ. ಜಗತ್ತಿನ ಹಲವು ಕಾವ್ಯ ಪರಂಪರೆಗಳ ಜೊತೆಗಿನ ಮಾತುಕತೆ ಇವರಿಗೆ ಪೂರಕವಾಗಿ ಒದಗಿ ಬಂದಿದೆ ಮಾತ್ರ. ಈ ಅಂಶವೇ ಇವರ ಕಾವ್ಯದ ಮಹತ್ವವನ್ನು ಸಕಾರಣವಾಗಿ ಸ್ಥಾಪಿಸುತ್ತದೆ.

ಶಿವಪ್ರಕಾಶರ ಕಾವ್ಯದ ಮೂಲಧ್ವನಿ 'ವಿಶ್ವಪ್ರಜ್ಞೆ'. ಕನ್ನಡ ಕಾವ್ಯ ಪರಂಪರೆಯಲ್ಲಿ ಶಿವಪ್ರಕಾಶರದ್ದು ವಿಶಿಷ್ಟ ಕಾವ್ಯವಾಗುವುದರಲ್ಲಿ ನಿರ್ಣಾಯಕ ಪಾತ್ರ ವಹಿಸುವುದು ಈ ಅಂಶವೇ. ಸುಮಾರು ಐದು ದಶಕಗಳ ತನಕದ ಕಾಲವ್ಯಾಪ್ತಿಯಲ್ಲಿ ಕಾವ್ಯ ಪ್ರಯಾಣ ನಡೆಸಿರುವ ಶಿವಪ್ರಕಾಶರು ಒಂಟಿ ಸಲಗದಂತೆ ನಡೆದಿದ್ದಾರೆ. ಇವರ ಕಾವ್ಯ ಮಾದರಿಯಿಂದ ಪ್ರಭಾವಿತರಾದ ಅನೇಕಾನೇಕ ಕವಿಗಳಿದ್ದಾರೆ ನಿಜ, ಆದರೆ ಅವರನ್ನು ಸಹಪಯಣಿಗರೆಂದು ಗುರುತಿಸುವುದು ಕಷ್ಟ. ಇವರ ದಾರಿ ಆ ದೃಷ್ಟಿಯಿಂದ ಅನುಕರಣೆಗೂ ಸುಲಭವಾಗಿ ಪಕ್ಕಾಗುವಂಥದ್ದಲ್ಲ. ಆದರೆ, ಯುವ ಕವಿಗಳಿಗೆ ಪ್ರಜ್ವಲಿಸುವ ಇವರ ಕಾವ್ಯದ ಸೆಳೆತದಿಂದ ಪಾರಾಗುವುದೂ ಕಷ್ಟ. ಆಕರ್ಷಕವಾಗಿ ಕಾಣುತ್ತಲೇ ದಕ್ಕಿಸಿಕೊಳ್ಳುವುದು ಕಷ್ಟ ಎನ್ನುವ ಅನುಭವ ಇವರ ಅಭಿಮಾನಿ ಯುವ ಕವಿಗಳದ್ದಾಗಿರಬೇಕು.

ಕನ್ನಡದಲ್ಲಿ ಶಿವಪ್ರಕಾಶರನ್ನು ಆರಂಭದಿಂದಲೂ ಅಪಾರ ಮೆಚ್ಚುಗೆಯಿಂದ ಒಪ್ಪಲಾಗಿದೆ. ಈ ಸಂಪುಟಕ್ಕೆ ಹೊಚ್ಚ ಹೊಸ ನೋಟದ ಪ್ರವೇಶ ಕೊಟ್ಟಿರುವ ಕೆ.ವಿ. ನಾರಾಯಣ ಅವರು ಲೇಖನದ ಆರಂಭದಲ್ಲಿಯೇ ಇನ್ನೂ ಎಂ.ಎ. ಓದುತ್ತಿದ್ದ ಇವರನ್ನು ಜಿ.ಎಸ್. ಶಿವರುದ್ರಪ್ಪ ಅವರು ಶಿವಪ್ರಕಾಶರನ್ನು ಪರಿಚಯಿಸಿದ್ದನ್ನು ನೆನೆಯುತ್ತಾರೆ. ಆ ಹೊತ್ತಿಗಾಗಲೇ ಕಾವ್ಯ ಇವರ ಒಲುಮೆಯಾಗಿತ್ತು ಎನ್ನುವ ಅಂಶವನ್ನೂ ಅವರು ಹೇಳುತ್ತಾರೆ. ಆಗಿನಿಂದಲೂ ಕನ್ನಡ ಜಗತ್ತು